# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 138 (1442)

ಮಾನ್ಯ ಸದಸ್ಯರ ಹೆಸರು: ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು: ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ: 16.03.2026

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ; ಹೊಸ ಸರ್ಕಾರಿ ಶಾಲೆಗಳನ್ನು ಪ್ರಾರಂಭಿಸಲು, ವಿಲೀನಗೊಳಿಸಲು, ಮುಚ್ಚಲು ಹಾಗೂ ಇರುವ ಶಾಲೆಗಳನ್ನು ಮುಂದುವರೆಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಯಾವುವು; ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆ, ದೂರದ ಮಾನದಂಡ, ಜನಸಂಖ್ಯೆ, ಭೌಗೋಳಿಕ ಪರಿಸ್ಥಿತಿ ಇತ್ಯಾದಿ ಹಾಗೂ ಇನ್ನಿತರ ಮಾನದಂಡಗಳ ಪೈಕಿ ಯಾವುವುಗಳನ್ನು ಆದ್ಯತೆಗೆ ಪರಿಗಣಿಸಲಾಗುವುದು. | ಕಳೆದ ಮೂರು ವರ್ಷಗಳಲ್ಲಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿರುವುದಿಲ್ಲ.<br>ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಿರುವುದಿಲ್ಲ. ವಿದ್ಯಾರ್ಥಿಗಳ ಶೂನ್ಯ ದಾಖಲಾತಿಯಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಪುನಃ ವಿದ್ಯಾರ್ಥಿಗಳ ದಾಖಲಾತಿಯಾದಲ್ಲಿ ಸದರಿ ಶಾಲೆಗಳನ್ನು ಪುನರಾರಂಭಿಸಲಾಗುವುದು.<br>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಮಾನದಂಡಗಳು ಈ ಕೆಳಕಂಡಂತಿರುತ್ತದೆ:-<br>1. 01 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು.<br>2. ಜನವಸತಿ ಪ್ರದೇಶದಲ್ಲಿ 100 ರಿಂದ 200 ಜನಸಂಖ್ಯೆ ಇರುವುದು.<br>3. ನಗರ ಪ್ರದೇಶ/ ಭೌಗೋಳಿಕ ಅಡತಡೆ ಇದ್ದಲ್ಲಿ 01.ಕಿ.ಮೀ ನಿಯಮಕ್ಕೆ ಸಡಿಲಿಕೆ ಇದೆ.<br>ಸರ್ಕಾರಿ ಶಾಲೆಗಳ ಸ್ಥಳಾಂತರ/ವಿಲೀನ/ಶೂನ್ಯ ದಾಖಲಾತಿ ಶಾಲೆ ಪುನರಾರಂಭ ಮಾಡುವ ಕುರಿತು ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ ರವರು ದಿನಾಂಕ:12.02.2024 ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು, **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿರುವುದಿಲ್ಲ. ಪ್ರಸ್ತುತ ವಿಶ್ವಕೀರ್ತಿ ಖಾಸಗಿ ಅನುದಾನಿತ ಶಾಲೆ, ಕುಂಜಾಲು ಇಲ್ಲಿ ಸದರಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. |

| | | |
|---|---|---|
| | 5 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಶಾಲೆಯಿಲ್ಲದೆ ಸುಮಾರು 93 ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳು ಶಿಕ್ಷಣ ಇಲಾಖೆಗೆ ಹಲವು ಮನವಿ ಸಲ್ಲಿಸಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು; | ಮುಂದುವರೆದು, ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ನೀಲಾವರ ಗ್ರಾಮ ಪಂಚಾಯಿತಿ ಹೊಸ ಸರ್ಕಾರಿ ಶಾಲೆ ಪ್ರಾರಂಭಿಸುವ ಬಗ್ಗೆ ದಿನಾಂಕ: 10.03.2026 ರಂದು ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಇ) | ಮಕ್ಕಳ ಶಿಕ್ಷಣದ ಹಕ್ಕಿನ ಹಿತದೃಷ್ಟಿಯಿಂದ ನೀಲಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು. | |
| ಈ) | ರಾಜ್ಯದ ಖಾಸಗಿ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳಲ್ಲಿರುವ ಅಗತ್ಯ ಮೂಲಭೂತ ಸೌಕರ್ಯಗಳ ಡಿಜಿಟಲ್ ಸ್ವರೂಪದ ರೀತಿಯ ಮಾಹಿತಿ ಲಭ್ಯವಿದೆಯೇ; ಅದನ್ನು ಎಷ್ಟು ಅವಧಿಗೊಮ್ಮೆ ಕಾಲೋಚಿತಗೊಳಿಸಲಾಗುತ್ತಿದೆ; | ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳಿಗೆ ಸಂಬಂಧಿಸಿದಂತೆ, ಶಾಲೆಗಳಲ್ಲಿನ ಅಗತ್ಯ ಮೂಲಭೂತ ಸೌಕರ್ಯಗಳ ಮಾಹಿತಿಯನ್ನು ಶಾಲಾ ಆಡಳಿತ ಮಂಡಳಿಯು ಖಾಸಗಿ ಶಾಲಾ ಸೇವೆಗಳ ನವೀಕರಣ ಪಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಛಾಯಾಚಿತ್ರ ಹಾಗೂ ವಿಡಿಯೋಗಳನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದ್ದು ಲಭ್ಯವಿರುತ್ತದೆ.<br><br>ಮಾನ್ಯತೆಯನ್ನು ಪಡೆದ ಅವಧಿ ಮುಕ್ತಾಯಗೊಂಡ ಸಂದರ್ಭದಲ್ಲಿ ಕಡ್ಡಾಯವಾಗಿ ಎಲ್ಲಾ ದಾಖಲೆಗಳೊಂದಿಗೆ ಮೂಲಭೂತ ಸೌಕರ್ಯಗಳ ಛಾಯಾಚಿತ್ರಗಳನ್ನು ಅಳವಡಿಸಿ ಅರ್ಜಿ ಸಲ್ಲಿಸಲು ಖಾಸಗಿ ಶಾಲಾ ಸೇವೆಗಳ ತಂತ್ರಾಂಶದಲ್ಲಿ ಅವಕಾಶವಿರುತ್ತದೆ.<br>ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಕಛೇರಿಯ SATS ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಶಾಲಾ ಹಂತದಲ್ಲಿ ಭರ್ತಿ ಮಾಡಲಾಗುತ್ತಿದೆ. |

ಆ) ಈಗಾಗಲೇ ಇರುವ ಸರ್ಕಾರಿ ಶಾಲೆಗಳಲ್ಲಿ ಕೊರತೆಯಿರುವ ಸೌಕರ್ಯಗಳು ಯಾವುವು; ಸಮರ್ಪಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕಾರ್ಯಯೋಜನೆಗಳನ್ನು ರೂಪಿಸಲಾಗಿದೆ?.

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಕೊರತೆ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯ ವಲಯದ ಅನುದಾನ ಮತ್ತು ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಈ ಕೆಳಕಂಡ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

- ನೂತನ ಶಾಲಾ ಕೊಠಡಿಗಳ ನಿರ್ಮಾಣ
- ಶಾಲಾ ಕೊಠಡಿಗಳ ದುರಸ್ತಿ
- ಶಾಲಾ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ
- ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು
- ಕಂಪ್ಯೂಟರ್ ಲ್ಯಾಬ್ ಸ್ಥಾಪನೆ
- ಸ್ಮಾರ್ಟ್ ಕ್ಲಾಸ್‌ಗಳ ಸ್ಥಾಪನೆ
- ಶುದ್ಧ ಕುಡಿಯುವ ನೀರು

2025-26ನೇ ಸಾಲಿನಲ್ಲಿ ರಾಜ್ಯವಲಯದ ಅನುದಾನದಲ್ಲಿ ಶಾಲಾ ತರಗತಿ ಕೊಠಡಿ ನಿರ್ಮಾಣ ಮತ್ತು ತರಗತಿ ಕೊಠಡಿ ದುರಸ್ತಿಗೆ ಈ ಕೆಳಕಂಡಂತೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಲಾಗಿದೆ.

| ಮೂಲ ಸೌಕರ್ಯದ ವಿಧ | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) |
|---|---|---|
| ನೂತನ ತರಗತಿ ಕೊಠಡಿ ನಿರ್ಮಾಣ | 1977 ಕೊಠಡಿಗಳು | 33,682 95 |
| ಶಾಲಾ ಕೊಠಡಿ ದುರಸ್ತಿ | 7293 ಕೊಠಡಿಗಳು | 9,688 89 |
| ಶೌಚಾಲಯಗಳ ನಿರ್ಮಾಣ | 1582 ಗಂಡು+1582 ಹೆಣ್ಣು ಮಕ್ಕಳ ಶೌಚಾಲಯಗಳು | 6328.00 |
| ಒಟ್ಟು | | 49699.84 |

2025 26ನೇ ಸಾಲಿನಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ 29 ಕೆ.ಪಿ.ಎಸ್ ಶಾಲೆಗಳಲ್ಲಿ ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣ, ವಿಜ್ಞಾನ ಪ್ರಯೋಗಾಲಯ ಕೊಠಡಿ ನಿರ್ಮಾಣ, ಕೊಠಡಿಗಳ ದುರಸ್ತಿ ಮತ್ತು ಶೌಚಾಲಯಗಳ ನಿರ್ಮಾಣ ಕಾಮಗಾರಿಗಳನ್ನು ರೂ.20.00 ಕೋಟಿಗಳಲ್ಲಿ ಕೈಗೊಳ್ಳಲು ಅನುಮೋದನೆ ನೀಡಿ ಅನುದಾನ ಒದಗಿಸಲಾಗಿದೆ.

2025-26ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 53685 ಡೆಸ್ಕ್‌ಗಳನ್ನು ರೂ.3532.16 ಲಕ್ಷಗಳಲ್ಲಿ ಒದಗಿಸಲಾಗುತ್ತಿದೆ.

| | | |
|---|---|---|
| | | 2025-26ನೇ ಸಾಲಿನ ಆಯವ್ಯಯ ಘೋಷಣೆಯಂತೆ 250 ಸರ್ಕಾರಿ ಶಾಲೆಗಳಲ್ಲಿ ರೂ 508.00 ಲಕ್ಷಗಳ ವೆಚ್ಚದಲ್ಲಿ ವಿಜ್ಞಾನ ಪ್ರಯೋಗಾಲಯ ಮತ್ತು 218 ಶಾಲೆಗಳಲ್ಲಿ ರೂ.1968.72 ಲಕ್ಷಗಳ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲಾಗುತ್ತಿದೆ.<br>ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 854 ಸರ್ಕಾರಿ ಶಾಲೆಗಳಲ್ಲಿ ರೂ 4429.20 ಲಕ್ಷಗಳ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್ ಮತ್ತು 3862 ಶಾಲೆಗಳಲ್ಲಿ ರೂ.9154.80 ಲಕ್ಷಗಳ ವೆಚ್ಚದಲ್ಲಿ ಸ್ಮಾರ್ಟ್ ಕ್ಲಾಸ್‌ಗಳನ್ನು ಸ್ಥಾಪಿಸಲಾಗುತ್ತಿದೆ.<br>ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿದ್ದು ಅನುಮೋದನಾ ಹಂತದಲ್ಲಿರುತ್ತದೆ. |

**ಇಪಿ 42 ಪಿಎಂಎ 2026**

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

ಕರ್ನಾಟಕ ಸರ್ಕಾರ

# ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಎಡಿಎಂ-2(4)ಹೊ.ಶಾ.ಮ.ವಿ.ಪ್ರಾ 1/2023-24 ದಿನಾಂಕ: 12-02-2024

## ಸುತ್ತೋಲೆ

**ವಿಷಯ:** 2024-25ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ/ ಪ್ರೌಢ ಶಾಲೆಗಳಲ್ಲಿ ಹೊಸದಾಗಿ 6-7/8ನೇ ತರಗತಿ /9-10ನೇ ತರಗತಿಗಳಿಗೆ ಉನ್ನತೀಕರಣ/ಆಂಗ್ಲ ಮಾಧ್ಯಮ ಪ್ರಾರಂಭ/ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ (ದ್ವಿಭಾಷಾ ಮಾಧ್ಯಮ -Bilingual) ಪ್ರಾರಂಭಿಸುವುದರೊಂದಿಗೆ ಸರ್ಕಾರಿ ಶಾಲೆಗಳ ಬಲವರ್ಧನೆ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು

**ಉಲ್ಲೇಖ:** 1.ರಾಜ್ಯ ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ ಇಡಿ 77 ಯೋಯೋಕ 2010 ಬೆಂಗಳೂರು ದಿನಾಂಕ:28.04.2012

2.ಸರ್ಕಾರದ ಆದೇಶ ಸಂಖ್ಯೆ:ಇಡಿ 109 ಯೋಯೋಕ 2018 ಬೆಂಗಳೂರು ದಿನಾಂಕ:18.05.2019

3.ಸರ್ಕಾರದ ಆದೇಶ ಸಂಖ್ಯೆ: ಇಡಿ 111 ಯೋಯೋಕ 2018 ಬೆಂಗಳೂರು ದಿನಾಂಕ:17.05.2019

********

**ಪ್ರಾಸ್ತಾವಿಕ :**

ಸಮಾಜದಲ್ಲಿನ ಶಾಲಾ ಅರ್ಹ ವಯಸ್ಸಿನ ಎಲ್ಲಾ ಮಕ್ಕಳಿಗೂ ಶಿಕ್ಷಣದ ಪೂರೈಕೆ ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ. ಆರ್.ಟಿ.ಇ ಕಾಯಿದೆ 2009 ಮತ್ತು ನಿಯಮಗಳನ್ವಯ 6 ರಿಂದ 14 ವಯೋಮಾನದ ಮಗುವಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಪೂರೈಕೆ ಸಾಂವಿಧಾನಿಕ ಹಕ್ಕಾಗಿದೆ. ಮತ್ತು ಮಕ್ಕಳ ಶೈಕ್ಷಣಿಕ ಹಕ್ಕಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಬದಲಾಗುತ್ತಿರುವ ಶೈಕ್ಷಣಿಕ ಅವಶ್ಯಕತೆಗಳು ಮತ್ತು ತಂತ್ರಜ್ಞಾನಾಧಾರಿತ ಕಲಿಕೆಗೆ ಹೊಂದಾಣಿಕೆ ಮಾಡಿಕೊಂಡು ಮಗುವಿನ ಕಲಿಕಾ ಬಲವರ್ಧನೆಯಾಗಬೇಕಾಗುತ್ತದೆ. ಅದಕ್ಕೆ ಪೂರಕವಾದ ಶೈಕ್ಷಣಿಕ ವಾತಾವಾರಣ ಎಲ್ಲಾ ಶಾಲೆಗಳಲ್ಲಿ ಲಭ್ಯ ಪಡಿಸಬೇಕಿದೆ. ವಿಶೇಷವಾಗಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅತ್ಯಂತ ಹಿಂದುಳಿದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಮಕ್ಕಳ ಶೈಕ್ಷಣಿಕ ಪೂರೈಕೆ ಗುಣಮಟ್ಟದಾಗಿರಬೇಕಾದಲ್ಲಿ ಅಂತಹ ಮಕ್ಕಳಿಗೆ ಶಾಲಾ ಸೌಲಭ್ಯತೆ (School Access) ಒದಗಿಸುವುದು ಸಾಮಾಜಿಕ ಜವಾಬ್ದಾರಿಯಾಗಿದೆ. ಇಂತಹ ಪ್ರದೇಶಗಳಲ್ಲಿನ ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ,ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಿಗೆ ಸರ್ಕಾರಿ ಶಾಲೆಗಳೇ ಶೈಕ್ಷಣಿಕ ಭವಿಷ್ಯದ ಸಂಜೀವಿನಿಯಾಗಿವೆ.

ಇಂತಹ ಮಕ್ಕಳ ಕಲಿಕೆ ಉತ್ತಮ ಗುಣಮಟ್ಟದಲ್ಲಿ ಲಭ್ಯವಾಗದೆ (ಉದಾಹರಣೆಗೆ:- ಉತ್ತಮ ಗುಣಮಟ್ಟದ ತಂತ್ರಜ್ಞಾನಾಧಾರಿತ ಕಲಿಕೆ, ಪ್ರಯೋಗಾಲಯ, ಗ್ರಂಥಾಲಯ , ಕ್ರೀಡಾಲಯ, ಉತ್ಕೃಷ್ಟ ಬೋಧನಾ ಕಲಿಕಾ ವಾತಾವರಣ, ಆಂಗ್ಲ ಭಾಷಾ ಬಳಕೆ ಇತರ ಕನಿಷ್ಠ ಮೂಲಭೂತ ಸೌಕರ್ಯಗಳ ಕೊರತೆಗಳು) ಮಗುವಿನ ಶೈಕ್ಷಣಿಕ ಭವಿಷ್ಯಕ್ಕೆ ಶಾಪವಾಗಿ ಕುಂಠಿತವಾಗಬಾರದು.

**ಪ್ರಸ್ತಾವನೆ ಸಲ್ಲಿಕೆ ಕುರಿತು.**

ಪ್ರಯುಕ್ತ ಕಡ್ಡಾಯವಾಗಿ ಶೈಕ್ಷಣಿಕ ವರ್ಷದ ಆರಂಭಕ್ಕೂ ಮುನ್ನಾ ರಾಜ್ಯದ ಯಾವ ಪ್ರದೇಶಗಳಲ್ಲಿ ಶೈಕ್ಷಣಿಕ ಹಿನ್ನಡೆಯಾಗಿರುತ್ತದೆ ಇದಕ್ಕಾಗಿ ಶೈಕ್ಷಣಿಕ ಅವಶ್ಯಕತೆಗಳನ್ನು ನೀಗಿಸಲು ಸಮೀಕ್ಷೆ ನಡೆಸಿ ಪರಿಶೀಲಿಸಿ ಅಗತ್ಯಾನುಸಾರ ಪ್ರಸ್ತುತ ಇರುವ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಪ್ರಾರಂಭ, ಆಂಗ್ಲ ಮಾಧ್ಯಮ ವಿಭಾಗ ಅಥವಾ ಈಗಿರುವ ಆಂಗ್ಲ ಮಾಧ್ಯಮದ ಜೊತೆ



6

Scanned with OKEN Scanne

ಇನ್ನೊಂದು ಹೆಚ್ಚುವರಿ ವಿಭಾಗ ಪ್ರಾರಂಭಿಸುವುದು. ಶಾಲೆಗಳಲ್ಲಿ ಹಾಲಿ ಇರುವ 1 ರಿಂದ 5ನೇ ತರಗತಿಗಳನ್ನು 6 ರಿಂದ 8ನೇ ತರಗತಿವರೆಗೆ ಅಥವಾ 1ರಿಂದ 7/8ನೇ ತರಗತಿಗಳನ್ನು 9 ಮತ್ತು 10ನೇ ತರಗತಿಗಳಿಗೆ ಉನ್ನತೀಕರಿಸುವುದು. ಯಾವುದಾದರೂ ಶಾಲೆಗಳನ್ನು ಸ್ಥಳಾಂತರಿಸುವ/ವಿಲೀನಗೊಳಿಸುವ ಅವಶ್ಯವಿದ್ದಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಅವಕಾಶ ಮಾಡಲಾಗುತ್ತಿದೆ. ಇನ್ನು ಮುಂದೆ ಪ್ರತಿ ವರ್ಷದ ಅಂತ್ಯದಲ್ಲಿ ಸರ್ಕಾರಿ ಶಾಲೆಗಳ ಕುರಿತಂತೆ ಪ್ರಸ್ತಾವನೆಗಳನ್ನು ಪಡೆದು ಸರ್ಕಾರಕ್ಕೆ ಅಗತ್ಯಾನುಸಾರ ಪರಿಶೀಲಿಸಿ ಅನುಮೋದನೆಗೆ ಶಿಫಾರಸ್ಸು ಮಾಡಲಾಗುವುದು.

ಯಾವುದೇ ಒಂದು ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗ, ಉನ್ನತೀಕರಣ, ಅಥವಾ ಹೊಸದಾಗಿ ಶಾಲೆ ಪ್ರಾರಂಭಿಸಬೇಕಿದ್ದಲ್ಲಿ ಸರ್ಕಾರದಿಂದ ಅಗತ್ಯ ಮೂಲಭೂತ ಸೌಕರ್ಯಗಳಿಗಾಗಿ ಅನುದಾನದ ಅವಶ್ಯಕತೆ ಇರುತ್ತದೆ. ಪ್ರಯುಕ್ತ ಪ್ರಸ್ತಾವನೆಗಳನ್ನು ಸಲ್ಲಿಸಲು ಪೂರಕ ಚೆಕ್ ಲಿಸ್ಟ್ ಅನ್ನು ನಿಗಧಿಪಡಿಸಿದೆ. ಅದರಂತೆ ಸರ್ಕಾರಕ್ಕೆ ಆರ್ಥಿಕ ಹೊರೆಯಾಗದಂತೆ ಸ್ಥಳೀಯ ಸಂಪನ್ಮೂಲ/ಸೌಲಭ್ಯಗಳನ್ನು ಕ್ರೋಢೀಕರಿಸಿ ಪ್ರಾರಂಭಿಸಲು ಸಾಧ್ಯವಿದ್ದಲ್ಲಿ ಮುಂಜೂರಾತಿಗೆ ಆದ್ಯತೆಯನ್ನು ನೀಡಲಾಗುತ್ತಿದೆ,

ಪ್ರತಿ ಪ್ರಸ್ತಾವನೆಯೂ ಸಹ ನಿಗಧಿಪಡಿಸಿದ ಚೆಕ್ ಲಿಸ್ಟನಲ್ಲಿರುವ ಷರತ್ತುಗಳನ್ನು ಮಾನದಂಡಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಈ ಬಗ್ಗೆ ಪ್ರಸ್ತಾವನೆಗಳನ್ನು ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಸದರಿ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗ / ಹೊಸ ಶಾಲೆ ಪ್ರಾರಂಭಿಸಿದಲ್ಲಿ ಯಾವುದೇ ಅಡ್ಡ ಪರಿಣಾಮಗಳು ಎದುರಾಗುವುದಿಲ್ಲವೆಂಬುದನ್ನು ಮತ್ತು ಅದರ ಅವಶ್ಯಕತೆಯ ತೀವ್ರತೆಯನ್ನು ಪರಿಶೀಲಿಸಿ ಸಮಾಲೋಚಿಸಿ ತಾಲ್ಲೂಕು ಮಟ್ಟದ ಸಮಿತಿ ಜಿಲ್ಲಾ ಮಟ್ಟಕ್ಕೆ ನಿಗಧಿಪಡಿಸಿದ ಚೆಕ್ ಲಿಸ್ಟ್/ಮಾನದಂಡಗಳಲ್ಲಿನ ಅಂಶಗಳನ್ನು ಪರಿಶೀಲಿಸಿ ಸ್ಪಷ್ಟವಾಗಿ ಆದ್ಯತೆ ಸಂಖ್ಯೆಯನ್ನು ನಮೂದಿಸಿ ಶಿಫಾರಸ್ಸು ಮಾಡುವುದು.

ಈ ಎಲ್ಲಾ ಪ್ರಕ್ರಿಯೆಯು ಕಡ್ಡಾಯವಾಗಿ ಆಯಾ ಶೈಕ್ಷಣಿಕ ವರ್ಷ ಪ್ರಾರಂಭಕ್ಕೂ ಮುನ್ನ ಅಂದರೆ ಏಪ್ರಿಲ್- 10 ರೊಳಗೆ ಅಂತಿಮಗೊಳಿಸುವುದು ಕಡ್ಡಾಯವಾಗಿರುತ್ತದೆ. ಖಾಸಗಿ ಶಾಲೆಗಳಿಗೆ ಪ್ರತಿ ವರ್ಷ ನೊಂದಣಿ/ಉನ್ನತೀಕರಣಕ್ಕಾಗಿ ಅರ್ಜಿ ಆಹ್ವಾನಿಸಿದಂತೆ ಸರ್ಕಾರಿ ಶಾಲೆಗಳಿಗೂ ಸಹ ಅರ್ಜಿ ಆಹ್ವಾನಿಸಿ ವಿಳಂಭವಾಗಿ/ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಸ್ವೀಕರಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಹಿನ್ನಲೆಯಲ್ಲಿ 2024-25ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈ ಕೆಳಕಂಡಂತೆ 6-7/8ನೇ ತರಗತಿ/9-10ನೇ ತರಗತಿ ಉನ್ನತೀಕರಣ / ಆಂಗ್ಲ ಮಾಧ್ಯಮ (ದ್ವಿಭಾಷಾ ಮಾಧ್ಯಮ -Bilingual) ಪ್ರಾರಂಭ/ಹೆಚ್ಚುವರಿ ವಿಭಾಗ ಪ್ರಾರಂಭಿಸುವ ಸಂಬಂಧ ಇಲಾಖೆ ನಿಗಧಿಪಡಿಸಿದ ಮಾನದಂಡಗಳನ್ನು ಆಧರಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಅನುಬಂಧ-1 ರಿಂದ 5ರವರಗೆ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕ್ರೂಢೀಕರಿಸಿ ಆದ್ಯತೆ ಮೇಲೆ ಪರಿಗಣಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಸಲ್ಲಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು (ಆಡಳಿತ/ಅಭಿವೃದ್ಧಿ) ರವರಿಗೆ ಸೂಚಿಸಿದೆ. ರಾಜ್ಯದ ಯಾವುದೇ ಭಾಗದಲ್ಲಿ ಮೇಲ್ಕಂಡಂತೆ ಹೊಸದಾಗಿ ಶಾಲೆ/ತರಗತಿ/ವಿಭಾಗ ಪ್ರಾರಂಭಿಸಲು ಇಲಾಖಾ ಅನುಮೋದನೆ ಅವಶ್ಯವಾಗಿರುತ್ತದೆ.

2023-24 ಮತ್ತು 2024-25ನೇ ಸಾಲಿಗೆ ಉಪನಿರ್ದೇಶಕರು (ಆಡಳಿತ) ರವರು ಈಗಾಗಲೇ 1ನೇ ತರಗತಿ ದ್ವಿ-ಭಾಷಾ ಮಾಧ್ಯಮ ಪ್ರಾರಂಭ/ ಮಂಜೂರಾತಿ ಕೋರಿ ಈಗಾಗಲೇ ರಾಜ್ಯ ಕಛೇರಿಗೆ 493 ಪ್ರಸ್ತಾವನೆಗಳು ಮತ್ತು ಈ ಕಛೇರಿಗೆ 120 ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತವನೆಗಳನ್ನು ಕಾಯ್ದಿರಿಸಲಾಗಿದ್ದು. ಪ್ರಸ್ತುತ ಹೊಸದಾಗಿ ಸಿದ್ಧಪಡಿಸಲಾದ ಸುತ್ತೋಲೆ ಮತ್ತು ಪರಿಷ್ಕೃತ ನಮೂನೆಗಳನ್ವಯ ಪರಿಶೀಲಿಸಿ ಮಾಹಿತಿ ಸಲ್ಲಿಸುವಂತೆ ತಿಳಿಸಿದೆ. ಶಾಲೆಗಳ ಪಟ್ಟಿಯನ್ನು ಇದರೊಂದಿಗೆ ಅನುಬಂಧಿಸಿದೆ.



Scanned with OKEN Scanner

**ಪ್ರಸ್ತುತ ಸರ್ಕಾರಿ ಶಾಲೆಗಳ ಅಂಕಿ ಅಂಶಗಳು ( ತರಗತಿವಾರು ಮಕ್ಕಳು, ಮಂಜೂರಾದ ಹುದ್ದೆಗಳು, ದ್ವಿಭಾಷಾ ಶಾಲೆಗಳು ಮತ್ತು ಕೆ.ಪಿ.ಎಸ್ ಶಾಲೆಗಳ ವಿವರ)**

| ಕ್ರ ಸಂ | ಶಾಲೆಗಳ ವಿಧ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ಶಿಕ್ಷಕರ ಮಂಜೂರಾದ ಹುದ್ದೆಗಳು | ಕರ್ತವ್ಯ ನಿರತ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|---|---|
| 1 | ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು (1-5) | 20174 | 533305 | 188531 | 145709 | 42822 |
| 2 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು (1-7/ 8) | 21739 | 2667780 | | | |
| 3 | ಸರ್ಕಾರಿ ಪ್ರೌಢಶಾಲೆಗಳು | 4844 | 1091266 | 48509 | 37471 | 11038 |
| | **ಒಟ್ಟು** | **46757** | **4292351** | **237040** | **183180** | **53860** |
| 1 | ಕನ್ನಡ-ಆಂಗ್ಲ/ ದ್ವಿ ಮಾಧ್ಯಮ ಪ್ರಾಥಮಿಕ ಶಾಲೆಗಳು | 2003 | 270000 | 21373 | 13243 | 8130 |
| 2 | ಉರ್ದು-ಆಂಗ್ಲ/ ದ್ವಿಮಾಧ್ಯಮ ಪ್ರಾಥಮಿಕ ಶಾಲೆಗಳು | 400 | 48000 | 3228 | 2324 | 904 |
| 3 | ಕೆ.ಪಿ.ಎಸ್ ಶಾಲೆಗಳು | 283 | 279343 | 11124 | 7276 | 3848 |

**2024-25ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ ಉನ್ನತೀಕರಿಸಿದ ತರಗತಿಗಳು/ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗಗಳು/ಶಾಲೆಗಳ ವಿಲೀನ ಇತರ ವಿಷಯಗಳ ಕುರಿತಂತೆ ಪ್ರಸ್ತಾವನೆ ವಿಧಗಳು:**

1. ಸರ್ಕಾರಿ ಶಾಲೆಗಳ ಉನ್ನತೀಕರಣ (6 ರಿಂದ7/8 ಮತ್ತು 9 ರಿಂದ 10ನೇ ತರಗತಿಗಳಿಗೆ ಕುರಿತು ಸಲ್ಲಿಸಬೇಕಾದ ನಮೂನೆ **(ಅನುಬಂಧ-1)**
2. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ಇರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ "ಹೊಸದಾಗಿ ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮ ವಿಭಾಗ "(ದ್ವಿಭಾಷಾ ಮಾಧ್ಯಮ) Bilingual) ವನ್ನು ತೆರೆಯುವ ಕುರಿತ ಪ್ರಸ್ತಾವನೆ **(ಅನುಬಂಧ-2)**
3. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹಾಲಿ ಇರುವ ಆಂಗ್ಲ ಮಾಧ್ಯಮ (ದ್ವಿಭಾಷಾ Bilingual) ಜೊತೆಗೆ ಹೆಚ್ಚುವರಿ ದಾಖಲಾತಿಯಿಂದಾಗಿ ಮತ್ತೊಂದು "ಹೆಚ್ಚುವರಿ ಆಂಗ್ಲ ಮಾಧ್ಯಮ (ದ್ವಿಭಾಷಾ Bilingual) ವಿಭಾಗ" ವನ್ನು ತೆರೆಯಲು ಪ್ರಸ್ತಾವನೆ **(ಅನುಬಂಧ-3)**
4. ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಹಾಲಿ ಇರುವ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಹಾಗೂ ಆಂಗ್ಲ ಮಾಧ್ಯಮ ಒಂದನೇ ತರಗತಿಗೆ ದಾಖಲಾತಿ ಹೆಚ್ಚಳದಿಂದಾಗಿ ಮತ್ತೊಂದು ಹೆಚ್ಚುವರಿಯಾಗಿ ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯುವ ಪ್ರಸ್ತಾವನೆ **(ಅನುಬಂಧ-4)**
5. ಸರ್ಕಾರಿ ಶಾಲೆಗಳ ಸ್ಥಳಾಂತರ/ವಿಲೀನ ಮತ್ತು ಶೂನ್ಯ ದಾಖಲಾತಿ ಶಾಲೆ ಪುನರ್ ಪ್ರಾರಂಭ ಮಾಡಲು ಸಲ್ಲಿಸಬೇಕಾದ ನಮೂನೆ **(ಅನುಬಂಧ-5)**



Scanned with OKEN Scanner

**ವಿಶೇಷ ಸೂಚನೆಗಳು:**

- ಸರ್ಕಾರಿ ಶಾಲೆಗಳಲ್ಲಿ 2024-25ನೇ ಸಾಲಿಗೆ ಪೂರ್ವ ಪ್ರಾಥಮಿಕ ಶಾಲೆಗಳು (ಎಲ್.ಕೆ.ಜಿ/ಯು.ಕೆ.ಜಿ) ಪ್ರಾರಂಭಿಸುವ ಸಂಬಂಧ ಈಗಾಗಲೇ ಪ್ರಸ್ತಾವನೆಗಳನ್ನು ನೇರವಾಗಿ ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿಗೆ ಸಲ್ಲಿಸಿದ್ದು, ಪರಿಶೀಲನಾ ಹಂತದಲ್ಲಿರುತ್ತವೆ.
- ಪ್ರಸ್ತುತ ಚಾಲ್ತಿ ಇರುವ 1ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ವಿಭಾಗವನ್ನು 6ನೇ ತರಗತಿಗೆ ಸ್ವಾಭಾವಿಕ ಬೆಳವಣಿಗೆಯಡಿ ಮುಂದುವರೆಸಲು ಉಪನಿರ್ದೇಶಕರು (ಆಡಳಿತ) ರವರು ಪ್ರಾಧಿಕಾರವಾಗಿರುತ್ತಾರೆ.
- 1 ರಿಂದ 7/8ನೇ ತರಗತಿ ಆಂಗ್ಲ ಮಾಧ್ಯಮ ವಿಭಾಗಗಳಿರುವ ಶಾಲೆಗಳನ್ನು 8/9 ನೇ ತರಗತಿಯಿಂದ ಆಂಗ್ಲ ಮಾಧ್ಯಮ ವಿಭಾಗ ಮುಂದುವರೆಸಲು ಆಯಾ ವಿಭಾಗದ ನಿರ್ದೇಶಕರು(ಪ್ರೌಢಶಿಕ್ಷಣ) ರವರು ಪ್ರಾಧಿಕಾರಗಳಾಗಿರುತ್ತಾರೆ. ಈ ಬಗ್ಗೆ ಇಲಾಖೆ ಸುತ್ತೋಲೆ ಗಮನಿಸುವುದು. ಪ್ರಸ್ತಾವನೆ ಸಲ್ಲಿಸುವ ಅಗತ್ಯವಿರುವುದಿಲ್ಲ.

## ಪ್ರಸ್ತಾವನೆಗಳನ್ನು ಸಲ್ಲಿಸುವ /ಪರಿಗಣಿಸುವ ಪೂರ್ವದಲ್ಲಿ ವಿವಿಧ ಹಂತದಲ್ಲಿ ಪರಿಶೀಲನಾ ಸಮಿತಿಗಳು ಗಮನಿಸಬೇಕಾದ ಪ್ರಮುಖ ಅಂಶಗಳು

**1. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗೆ(6 ರಿಂದ 7ನೇ ತರಗತಿ) ಉನ್ನತೀಕರಣ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ/9 ಮತ್ತು 10ನೇ ತರಗತಿ ಪ್ರಾರಂಭಿಸುವ ಕುರಿತು. (ಅನುಬಂಧ-1)**

- ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ಉನ್ನತೀಕರಿಸಲು ಆರ್.ಟಿ.ಇ ಕಾಯಿದೆ 2009ಮತ್ತು ನಿಯಮಗಳನ್ವಯ 3 ಕಿ.ಮೀ ವ್ಯಾಪ್ತಿಯಲ್ಲಿ ಇಲಾಖಾ ವತಿಯಿಂದ ಯಾವುದೇ ಸರ್ಕಾರಿ , ಅನುದಾನಿತ & ಅನುದಾನ ರಹಿತ ಹಿರಿಯ ಪ್ರಾಥಮಿಕ ಶಾಲೆಗಳು ನಡೆಯುತ್ತಿರಬಾರದು.
- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿ ಪ್ರಾರಂಭಿಸಲು ಆರ್.ಟಿ.ಇ ಕಾಯಿದೆ 2009ಮತ್ತು ನಿಯಮಗಳನ್ವಯ 5 ಕಿ.ಮೀ ವ್ಯಾಪ್ತಿಯಲ್ಲಿ ಇಲಾಖಾ ವತಿಯಿಂದ ಯಾವುದೇ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳು ನಡೆಯುತ್ತಿರಬಾರದು .
- ಹಿರಿಯ ಪ್ರಾಥಮಿಕ ಶಾಲೆಗೆ/8ನೇ ತರಗತಿಗೆ ದಾಖಲಾಗುವ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚಿರಬೇಕು.
- ಶಾಲೆಯಲ್ಲಿ ಹೆಚ್ಚುವರಿ ಕೊಠಡಿಗಳು, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಪೀಠೋಪಕರಣಗಳು ಮತ್ತು ಇತರ ಮೂಲ ಭೂತ ಸೌಲಭ್ಯಗನ್ನು ಹೊಂದಿರಬೇಕು
- ಸದರಿ ಶಾಲೆ/ತರಗತಿ ಪ್ರಾರಂಭ/ಉನ್ನತೀಕರಣದಿಂದಾಗಿ ಸ್ಥಳೀಯ ಅಥವಾ ಅಕ್ಕಪಕ್ಕದ ಯಾವುದೇ ಶಾಲೆಗಳಿಗೆ ದಾಖಲಾತಿ ಕುಂಠಿತವಾಗದಂತೆ ಪರಿಶೀಲಿಸಿ ಕ್ರಮವಹಿಸುವುದು.
- ಸರ್ಕಾರಿ ಶಾಲೆಗಳ ಉನ್ನತೀಕರಣ ಸಂಬಂಧ ನಿಯಮಾನುಸಾರ ಪರಿಶೀಲಿಸಿ ಅನುಬಂಧ-1 ರನ್ವಯ ಪ್ರಸ್ತಾವನೆ ಸಲ್ಲಿಸುವುದು.
- ಪ್ರೌಢಶಾಲೆಯಾಗಿ (9 ಮತ್ತು 10ನೇ ತಗತಿ) ಉನ್ನತೀಕರಿಸಿ ಪ್ರಾರಂಭಿಸಲು ಅಗತ್ಯ ಮೂಲಭೂತ ಸೌಲಭ್ಯಗಳು, ಮಕ್ಕಳ ದಾಖಲಾತಿ ಲಭ್ಯತೆ, ಹಾಗೂ ಸುತ್ತಮುತ್ತಲೂ ಶಾಲಾ ಲಭ್ಯತೆ (School Access) ಇಲ್ಲದಿರುವುದನ್ನು ಹಾಗೂ ಶಾಲಾ ವಂಚಿತ ಮಕ್ಕಳ ಮಾಹಿತಿ ಪರಿಶೀಲಿಸಿ ಪರಿಗಣಿಸುವುದು.

ಈ ರೀತಿ ಸರ್ಕಾರಿ ಶಾಲೆಗಳನ್ನು ಈಗಾಗಲೇ ಆರ್.ಟಿ.ಇ ಕಾಯಿದೆ 2009 ಮತ್ತು 2012ರ ನಿಯಮಗಳಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅನುಷ್ಠಾನ ಸಂದರ್ಭದಲ್ಲಿ ಸಮಗ್ರವಾಗಿ ಎಲ್ಲಾ ಜನವಸತಿ ಪ್ರದೇಶದಲ್ಲಿ ಶಾಲಾ ಸೌಲಭ್ಯ ನೀಡಲಾಗಿದೆ. ಪ್ರಸ್ತುತ ಈಗಿನ ಸಂದರ್ಭಕ್ಕೆ ಹಲವಾರು ಕಾರಣಗಳಿಂದಾಗಿ ಮೇಲ್ಕಂಡಂತೆ ಶಾಲೆ/ತರಗತಿಗಳನ್ನು ಪ್ರಾರಂಭಿಸಲು ವಿವಿಧ ಗ್ರಾಮ/ತಾಲ್ಲೂಕು/ಜಿಲ್ಲೆಗಳಿಂದ ಪ್ರಸ್ತಾವನೆಗಳು ಬರುತ್ತಿರುತ್ತವೆ. ಆದರೆ ಪ್ರಸ್ತಾವನೆಗಳು ಅಪೂರ್ಣ ಮತ್ತು ಸ್ಪಷ್ಟಶಿಫಾರಸ್ಸುಗಳಿಲ್ಲದೆ ರಾಜ್ಯ ಕಛೇರಿ ಹಂತದಲ್ಲಿ ನಿರ್ಧಾರವನ್ನು ಕೈಗೊಳ್ಳಲಾಗುತ್ತಿಲ್ಲ. ಪ್ರಯುಕ್ತ ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸ್ಪಷ್ಟ



Scanned with OKEN Scanner

ಅಭಿಪ್ರಾಯದೊಂದಿಗೆ ಸಲ್ಲಿಸುವ ಸಂಬಂಧ ಈ ಕೆಳಕಂಡ ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ

**2.ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ಇರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮ (ದ್ವಿಭಾಷಾ ಮಾಧ್ಯಮ Bilingual) ಹೆಚ್ಚುವರಿ ವಿಭಾಗ ತೆರೆಯುವ ಕುರಿತು (ಅನುಬಂಧ-2)**

**ಮತ್ತು**

**3.ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹಾಲಿ ಇರುವ ಆಂಗ್ಲ ಮಾಧ್ಯಮದ ಜೊತೆಗೆ ಹೆಚ್ಚುವರಿಯಾಗಿ ಮತ್ತೊಂದು ಆಂಗ್ಲ ಮಾಧ್ಯಮ (ದ್ವಿಭಾಷಾ ಮಾಧ್ಯಮ Bilingual) ವಿಭಾಗವನ್ನು ತೆರೆಯುವ ಕುರಿತು (ಅನುಬಂಧ-3)**

- ಕ್ರಮ ಸಂಖ್ಯೆ 2 ಮತ್ತು 3ಕ್ಕೆ ಕೆಳಕಂಡ ಅಂಶಗಳು ಸಾಮಾನ್ಯವಾಗಿದ್ದು ಪರಿಶೀಲಿಸಿ ಸಲ್ಲಿಸುವುದು
- ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ತೆರೆದಲ್ಲಿ ಹಾಲಿ ಇರುವ ಕನ್ನಡ ಮಾಧ್ಯಮ/ಇತರೆ ಮಾಧ್ಯಮ ದಾಖಲಾತಿಗೆ ಧಕ್ಕೆಯಾಗದಂತೆ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವುದು.
- ಆಂಗ್ಲ ಮಾಧ್ಯಮ ತೆರೆಯಲು ಹೆಚ್ಚುವರಿ ಕೊಠಡಿಗಳು ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು
- ಕನ್ನಡ ಮಾಧ್ಯಮದ ತರಗತಿಗಳ ದಾಖಲಾತಿಗೆ ಕುಂಠಿತವಾಗದಂತೆ ಪ್ರತಿ ತರಗತಿಯಲ್ಲಿ (1-8) ಕನಿಷ್ಠ ಇರಬೇಕಾದ ಮಕ್ಕಳ ದಾಖಲಾತಿ ಮಿತಿಯನ್ನು ಕಾಯ್ದುಕೊಳ್ಳುವುದು. ( ದ್ವಿಭಾಷಾ ಮಾಧ್ಯಮ ವಿಬಾಗಗಳನ್ನು ಪ್ರಾರಂಭಿಸಲು ಈ ಹಿಂದೆ ಸರ್ಕಾರವು ನಿಗಧಿಗೊಳಿಸಿದಂತೆ ಕನಿಷ್ಠ ತರಗತಿವಾರು ಮಕ್ಕಳ ಸಂಖ್ಯೆ ಕನಿಷ್ಠ 30 ಇರುವಂತೆ ಕಾಯ್ದುಕೊಳ್ಳುವುದು. )
- ಹಾಲಿ ಇರುವ ಶಿಕ್ಷಕರ ಸೇವೆಯನ್ನು ಬಳಸಿಕೊಂಡು ತರಗತಿ ಬೋಧನೆಗೆ ಕ್ರಮವಹಿಸುವುದು.
- ಹೆಚ್ಚುವರಿ ಶಿಕ್ಷಕರ ಅಗತ್ಯವಿದ್ದಲ್ಲಿ ಶಾಲೆಗೆ ಸಮೀಪವಿರುವ ಹೆಚ್ಚುವರಿ ಶಿಕ್ಷಕರನ್ನು ಬೋಧನೆ ಸಂಬಂಧ ಅಥವಾ ಎಸ್.ಡಿ.ಎಂ.ಸಿ ರವರ ಸಹಕಾರದೊಂದಿಗೆ ಅತಿಥಿ ಶಿಕ್ಷಕರನ್ನು ನೇಮಿಸಲು ಕ್ರಮವಹಿಸುವುದು.
- 6 ಮತ್ತು 7, 8ನೇ ತರಗತಿ ಆಂಗ್ಲ ಮಾಧ್ಯಮ ವ್ಯಾಸಂಗಕ್ಕೆ ಸಹಾಯವಾಗುವಂತಿರಬೇಕು.
- ಹಾಗೂ ಪ್ರಸ್ತುತ ಲಭ್ಯವಿರುವ ಶಾಲಾ ಕೊಠಡಿಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸುವುದು.
- ಸ್ಥಳೀಯ ಪೋಷಕರು/ಎಸ್.ಡಿ.ಎಂ.ಸಿ ರವರುಗಳು ಅಗತ್ಯವಾರು ಸ್ಥಳೀಯರ/ದಾನಿಗಳ ಸಹಕಾರ ಪಡೆದು ಸದರಿ ಹೆಚ್ಚುವರಿ ವಿಭಾಗಗಳನ್ನು ನಿರ್ವಹಿಸುವಂತೆ ನಿರ್ಣಯಿಸಿರಬೇಕು.

ಈ ಮೇಲ್ಕಂಡ ಷರತ್ತುಗಳೊಂದಿಗೆ ಆರ್.ಟಿ.ಇ ಕಾಯಿದೆ ಮತ್ತು ನಿಯಮಗಳನ್ವಯ ಪರಿಶೀಲಿಸಿ **ಅನುಬಂಧ-2 ಮತ್ತು ಅನುಬಂಧ- 3ರಲ್ಲಿ** ಪ್ರಸ್ತಾವನೆಯನ್ನು **ಸಲ್ಲಿಸುವುದು**

**4.ಕರ್ನಾಟಕ ಪಬ್ಲಿಕ್ ಶಾಲೆ(KPS)ಗಳಲ್ಲಿನ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಹಾಗೂ ಒಂದನೇ ತರಗತಿಗೆ ಹೆಚ್ಚುವರಿಯಾಗಿ ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯುವ ಕುರಿತು. (ಅನುಬಂಧ-4)**

(ಸರ್ಕಾರದ ಆದೇಶ ಸಂಖ್ಯೆ ಇಡಿ 111 ಯೋಯೋಕ 2018 ಬೆಂಗಳೂರು ದಿನಾಂಕ:17.05.2019ರಂತೆ)

- ಕೆ.ಪಿ.ಎಸ್ ಗಳಲ್ಲಿ ಹೆಚ್ಚುವರಿ ಆಂಗ್ಲ ಮಾಧ್ಯಮ ತೆರೆಯಲು ಹೆಚ್ಚುವರಿ ಕೊಠಡಿಗಳು ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು.
- ಕೆ.ಪಿ.ಎಸ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕದ ಒಂದು ವಿಭಾಗದಲ್ಲಿ ಕನಿಷ್ಠ 20 ರಿಂದ ಗರಿಷ್ಠ 30 ಮಕ್ಕಳನ್ನು ದಾಖಲಿಸತಕ್ಕದ್ದು.



Scanned with OKEN Scanner

- ಕೆ.ಪಿ.ಎಸ್ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗವನ್ನು ತೆರೆಯಲು ಪ್ರಸ್ತಾವನೆಯನ್ನು ನೇರವಾಗಿ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ರವರಿಗೆ ಕಳುಹಿಸತಕ್ಕದ್ದು.
- ಹಾಗೂ ಕೆ.ಪಿ.ಎಸ್ ಶಾಲೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದ ಸಂಖ್ಯೆ : ಇಡಿ 111 ಯೋಯೋಕ 2018, ಬೆಂಗಳೂರು ದಿನಾಂಕ:17.05.2019ರನ್ವಯ ಹಾಗೂ ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ SSK/QA/Pre-Primary/2019-20 ದಿನಾಂಕ:20.05.2019ರ ರೀತ್ಯಾ ಕ್ರಮವಹಿಸತಕ್ಕದ್ದು.
- ಇತರೆ ಪೂರಕ ಅಂಶಗಳನ್ನು ದಾಖಲಿಸುವುದು.
- ಈ ಮೇಲ್ಕಂಡ ಷರತ್ತುಗಳೊಂದಿಗೆ ಆರ್.ಟಿ.ಇ ಕಾಯಿದೆ ಮತ್ತು ನಿಯಮಗಳನ್ವಯ ಪರಿಶೀಲಿಸಿ **ಅನುಬಂಧ-4 ರಲ್ಲಿ** ಪ್ರಸ್ತಾವನೆಯನ್ನು ಸಲ್ಲಿಸುವುದು

## 5.ಸರ್ಕಾರಿ ಶಾಲೆಗಳ ಸ್ಥಳಾಂತರ/ವಿಲೀನ/ಶೂನ್ಯ ದಾಖಲಾತಿ ಶಾಲೆ ಪುನರಾರಂಭ ಮಾಡುವ ಕುರಿತು (ಅನುಬಂಧ-5)

- ಸದರಿ ಶಾಲೆಯಲ್ಲಿ ಪ್ರಸ್ತುತ ಶೂನ್ಯ ದಾಖಲಾತಿ ಇದ್ದಲ್ಲಿ ತಾತ್ಕಾಲಿಕವಾಗಿ ಶಾಲೆ ಸ್ಥಗಿತಗೊಳಿಸಲು ಮಾತ್ರ ಕ್ರಮವಹಿಸುವುದು.
- ಸದರಿ ಶಾಲೆಯ ಸ್ಥಿರ/ಚರಾಸ್ತಿಗಳ ವಿವರಗಳ ತಪಾಸಣೆ ಮಾಡಿ ವರದಿ ದಾಖಲಿಸಿ ದೃಢೀಕರಿಸಿ ತಾತ್ಕಾಲಿಕವಾಗಿ ಪಕ್ಕದ ಸರ್ಕಾರಿ ಶಾಲೆಗೆ ಹಸ್ತಾಂತರಿಸುವುದು.
- ಸದರಿ ಶಾಲೆಯ ಕಟ್ಟಡ ದುಸ್ಥಿತಿಯಲ್ಲಿದೆಯೇ? ಅಥವಾ ಅಪಾಯ ಸ್ಥಿತಿಯಲ್ಲಿದೆಯೇ? ವಿವರ
- ಸದರಿ ಶಾಲೆಯ 1 ರಿಂದ 3 ಕಿ.ಮೀ ವ್ಯಾಪ್ತಿಯಲ್ಲಿರುವ ಅಕ್ಕ-ಪಕ್ಕ ಸಮೀಪದಲ್ಲಿರುವ ಶಾಲೆಗಳ ವಿವರ ಮತ್ತು ಸ್ಥಳಾಂತರ/ವಿಲೀನ ಮಾಡಲಾಗುತ್ತಿರುವ ಶಾಲೆಯಲ್ಲಿ ದಾಖಲಾಗುವ ಮಕ್ಕಳ ಸಂಖ್ಯೆ
- ಯಾವ ಉದ್ದೇಶಕ್ಕಾಗಿ ಶಾಲೆಯನ್ನು ಸ್ಥಳಾಂತರ/ವಿಲೀನ ಮಾಡಲಾಗುತ್ತಿದೆ.
- ಭವಿಷ್ಯದಲ್ಲಿ ಸದರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಳವಾಗುವ ಸಂಭವವಿದೆಯೇ?
- ಶಿಕ್ಷಕರು/ಮುಖ್ಯ ಶಿಕ್ಷಕರು ಹೆಚ್ಚುವರಿಯಾಗುತ್ತಾರೆಯೇ?
- ಸ್ಥಳಾಂತರ/ವಿಲೀನ ಪ್ರಕ್ರಿಯೆಯಿಂದಾಗಿ ಅಲ್ಲಿನ ಸ್ಥಳೀಯ ಶಾಲಾ ಮೂಲಭೂತ ಸೌಲಭ್ಯಗಳ ರಕ್ಷಣೆ ಬಗ್ಗೆ ಮಾಹಿತಿ
- ಅಗತ್ಯವಾದಷ್ಟು ಮೂಲಭೂತ ಸೌಲಭ್ಯಗಳು , ಶಿಕ್ಷಕರು/ಸಿಬ್ಬಂದಿ ಲಭ್ಯತೆ ಬಗ್ಗೆ ವಿವರ
- ವಿಲೀನಗೊಳಿಸುವ/ಸ್ಥಳಾಂತರಗೊಳಿಸುವ ಶಾಲೆ ಅಥವಾ ಸ್ಥಳದ ಸಂಪೂರ್ಣ ವಿವರ ಮೇಲ್ಕಂಡಂತೆ ಪರಿಶೀಲಿಸಿ ದೃಢೀಕರಿಸಿ ಸ್ಪಷ್ಟಾಭಿಪ್ರಾಯದೊಂದಿಗೆ ಉಪನಿರ್ದೇಶಕರು ಸಲ್ಲಿಸುವುದು.
- ಶೂನ್ಯ ಶಾಲೆಯನ್ನು ಮರು ಪ್ರಾರಂಭಿಸಿದಲ್ಲಿ ಸದರಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳು ಉತ್ತಮವಾಗಿವೆಯೇ?
- ಶಾಲೆ ಪುನರಾರಂಭ ಮಾಡಿದ್ದಲ್ಲಿ ದಾಖಲಾಗುವ ಮಕ್ಕಳ ಸಂಖ್ಯಾ ವಿವರ
- ಪ್ರೋತ್ಸಾಹ ದಾಯಕ ಯೋಜನೆಗಳ ಲಭ್ಯತೆ /ಅಕ್ಷರ ದಾಸೋಹ ನಿರ್ವಹಣೆ/ ಅಡುಗೆ ಸಿಬ್ಬಂದಿ ನೇಮಕಾತಿ ಮತ್ತು ಎಸ್.ಡಿ.ಎಂ.ಸಿ ರಚನೆ ಬಗ್ಗೆ ಮಾಹಿತಿ
- ಶಾಲೆ ಪುನರಾರಂಭ ಮಾಡಿದ್ದಲ್ಲಿ ಮಕ್ಕಳ ಬೋಧನ ನಿರ್ವಹಣೆಗೆ ಶಿಕ್ಷಕರ ಲಭ್ಯತೆ ಬಗ್ಗೆ ವಿವರ
- ಈ ಮೇಲ್ಕಂಡ ಎಲ್ಲಾ ಅಂಶಗಳೊಂದಿಗೆ ಅನಿರೀಕ್ಷಿತವಾಗಿ /ತಾತ್ಕಾಲಿಕವಾಗಿ ಮಕ್ಕಳ ದಾಖಲಾತಿ ಶೂನ್ಯವಾಗಿದ್ದು/ ಮಕ್ಕಳ ಸಂಖ್ಯೆ ಕಡಿಮೆಯಾಗಿದ್ದು, ಪುನಃ ಶಾಲೆಯನ್ನು ಅದೇ ಸ್ಥಳದಲ್ಲಿ ಆರಂಭಿಸಲು ಅವಕಾಶಗಳಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ **ಅನುಬಂಧ-5ರನ್ವಯ** ಪ್ರಸ್ತಾವನೆಯನ್ನು ಸಲ್ಲಿಸುವುದು.



Scanned with OKEN Scanner

**ಪ್ರಸ್ತಾವನೆಗಳ ಪರಿಶೀಲನೆಗಾಗಿ ವಿವಿಧ ಹಂತದ ಸಮಿತಿಗಳ ರಚನೆ ಮತ್ತು ಜವಾಬ್ದಾರಿಗಳು**

**1.ತಾಲ್ಲೂಕು ಹಂತದ ಸಮಿತಿ ಮತ್ತು ಕರ್ತವ್ಯಗಳು**

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಹಾಗೂ ಡಯಟ್‌ನ ತಾಲ್ಲೂಕು ನೋಡಲ್ ಅಧಿಕಾರಿಗಳು,/ ಹಿರಿಯ ಉಪನ್ಯಾಸಕರು ತಾಲ್ಲೂಕು ಹಂತದ ಸಮಿತಿಯ ಸದಸ್ಯರಾಗಿರುತ್ತಾರೆ.

ಪ್ರಸ್ತಾವನೆಗಳು ಬಿ.ಆರ್.ಸಿ ಕಛೇರಿಗಳಲ್ಲಿ ಸ್ವೀಕೃತಗೊಂಡು ಕ್ರೋಢೀಕರಿಸಿ ತಾಲ್ಲೂಕು ಸಮಿತಿಗೆ ಸಲ್ಲಿಸುವುದು. ನಿರ್ವಹಣೆ / ಕ್ರಮ ಬಿ.ಆರ್.ಸಿ ಕಛೇರಿ

**ಕ್ಷೇತ್ರವಾರು ಮಾಹಿತಿ ಸಂಗ್ರಹಣೆ, ಕ್ರೋಢೀಕರಣ ಮತ್ತು ಸಲ್ಲಿಕೆ, ನಿರ್ವಹಣೆ/ಕ್ರಮ**

ಶಾಲಾ ಮುಖ್ಯೋಪಧ್ಯಾಯರುಗಳು ಮತ್ತು CRP ಗಳಿಂದ ಮೇಲ್ಕಂಡಂತೆ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗ ಆಂಗ್ಲ ಮಾಧ್ಯಮ / ಹೊಸದಾಗಿ ಶಾಲೆ ಮಂಜೂರಾತಿ. 6-7/8 ಉನ್ನತೀಕರಣ ಶಾಲೆ ಸ್ಥಳಾಂತರ, ಶೂನ್ಯ ಶಾಲೆ ಮರು ಪ್ರಾರಂಭದ ಕುರಿತು ಸ್ವೀಕೃತ ಪ್ರಸ್ತಾವನೆಗಳನ್ನು ಸ್ಥಳೀಯ ಅಗತ್ಯತೆ ಇದ್ದಲ್ಲಿ ಮಾತ್ರ ಮೇಲಿನಂತೆ ನಿಗಧಿಪಡಿಸಿದ ಮಾನದಂಡಗಳನ್ವಯ/ಅನುಬಂಧಗಳಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿ ಸಿ.ಆರ್.ಸಿ ಹಂತದಲ್ಲಿ ಕ್ಷೇತ್ರವಾರು ಸ್ಥಳಪರಿಶೀಲನೆ ಮತ್ತು, ಮಾಹಿತಿ ಸಂಗ್ರಹಣೆ ಮಾಡಿ ಅಂತಿಮವಾಗಿ ಕ್ರೋಢೀಕರಿಸಿ ಪ್ರಸ್ತಾವನೆಯನ್ನು ಪಡೆಯುವುದು.

**ತಾಲ್ಲೂಕು ಹಂತದಲ್ಲಿ ಮಾಹಿತಿ ಕ್ರೋಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಕೆ:**

ಶಾಲಾ ಮುಖ್ಯೋಪಧ್ಯಾಯರು ಮತ್ತು CRP ರವರಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ತಾಲ್ಲೂಕು ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಅಗತ್ಯತೆಯನುಸಾರ (ಒಟ್ಟಾರೆ ಬೇಡಿಕೆಗಳಲ್ಲಿ ಆಧ್ಯತೆ ಮೇಲೆ ಪಟ್ಟಿ ಮಾಡುವುದು) ಕ್ರೋಢೀಕರಿಸಿ ಜಿಲ್ಲಾ ಹಂತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

1. ಶಾಲೆ ಉನ್ನತೀಕರಣ/ದ್ವಿಭಾಷಾ ಮಾಧ್ಯಮ ಪ್ರಾರಂಭ/ಹೆಚ್ಚುವರಿ ವಿಭಾಗ ತೆರೆಯಲು ಅನುಮತಿ ಸಂಬಂಧ ಕ್ರಮ ಸಂಖ್ಯೆ 1 ರಿಂದ 5 ರಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

2. ಸದರಿ ಸುತ್ತೋಲೆ/ಜ್ಞಾಪನದಲ್ಲಿ ನೀಡಲಾಗಿರುವ ಅನುಬಂಧ/ನಮೂನೆಗಳಲ್ಲಿನ ಎಲ್ಲಾ ಅಂಶಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ ಅಗತ್ಯತೆ ಇದ್ದಲ್ಲಿ ಹಾಗೂ ಅರ್ಹ ಪ್ರಕರಣಗಳ ಕುರಿತು ಮಾತ್ರ ಪ್ರಸ್ತಾವನೆಗಳನ್ನು ಸಲ್ಲಿಸುವುದು.

3. ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಕನಿಷ್ಠ ಮೂಲಭೂತ ಸೌಕರ್ಯಗಳು ಅಥವಾ ಸ್ಥಳೀಯರ ಸಹಕಾರ, ದಾನಿಗಳು, ನಮ್ಮ ಶಾಲೆಗ ನನ್ನ ಕೊಡುಗೆ ಯೋಜನೆಯಡಿ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ ಸಂಪನ್ಮೂಲ ಕ್ರೋಢೀಕರಿಸಲು ಲಭ್ಯವಿರುವ ಶಾಲೆಗಳನ್ನು ಪರಿಗಣಿಸುವುದು.

4. ಆಧ್ಯತೆ ಮೇಲೆ ಪರಿಗಣಿಸಲಾದ/ ಆಯ್ಕೆ ಮಾಡಿರುವ ಶಾಲೆಗಳಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳು ಕಡಿಮೆ ಇದ್ದ ಪಕ್ಷದಲ್ಲಿ ಮೂಲಭೂತ ಸೌಲಭ್ಯಗಳ ಅಗತ್ಯತೆ ಬಗ್ಗೆ ಪರಿಶೀಲಿಸಿ ನೀಡಿರುವ ನಮೂನೆಗಳಲ್ಲಿ ಬೇಡಿಕೆ ಸಲ್ಲಿಸುವುದು.

5.ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಕ್ರಮವಾಗಿ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸ್ಥಳ ಪರಿಶೀಲನೆ ಮಾಡುವುದು. ಹಾಗೂ ಶಾಲೆ ಪ್ರಾರಂಭಿಸಲು/ಉನ್ನತೀಕರಿಸಲು/ಹೆಚ್ಚುವರಿ ವಿಭಾಗ ತೆರೆಯಲು ಮಕ್ಕಳು, ಶಿಕ್ಷಕರು, ಮೂಲಭೂತ ಸೌಲಭ್ಯಗಳ ಲಭ್ಯತೆ ಬಗ್ಗೆ ಖಚಿತಪಡಿಸಿಕೊಳ್ಳುವುದು.

6.ಶಾಲೆ ಪ್ರಾರಂಭಿಸುವುದರಿಂದ/ಉನ್ನತೀಕರಿಸುವುದರಿಂದ/ಹೆಚ್ಚುವರಿ ವಿಭಾಗ ಪ್ರಾರಂಭಿಸುವುದರಿಂದ ಸ್ಥಳೀಯ ಶಾಲೆಗಳು/ ಅಕ್ಕ-ಪಕ್ಕದ ಶಾಲೆಗಳಲ್ಲಿನ ಮಕ್ಕಳ ದಾಖಲಾತಿಗೆ ತೊಂದರೆಯಾದಂತೆ ಪರಿಶೀಲಿಸುವುದು.



Scanned with OKEN Scanner

7.ತಾಲ್ಲೂಕು ಸಮಿತಿಯಲ್ಲಿ ಮೇಲ್ಕಂಡ ಅಂಶಗಳ ಬಗ್ಗೆ ಹಾಗೂ ನೀಡಲಾಗಿರುವ ಮಾನದಂಡಗಳ ಬಗ್ಗೆ
ಕೂಲಂಕೂಷವಾಗಿ ಪರಿಶೀಲಿಸಿ, ಚರ್ಚಿಸಿ ಆದ್ಯತೆ ಮೇಲೆ ಪರಿಗಣಿಸಿ, ಆದ್ಯತೆವಾರು ಕ್ರಮಸಂಖ್ಯೆ ನೀಡಿ
ಯಾವುದೇ ಪೂರ್ವಗ್ರಹ ಪೀಡಿತರಾಗದೆ ಅತ್ಯಂತ ಅವಶ್ಯಕತೆ ಇರುವ ಮತ್ತು ಭವಿಷ್ಯದಲ್ಲಿ
ಸಹಕಾರಿ/ಅಭಿವೃದ್ಧಿಯಾಗುವ ಕುರಿತ ಮುಂಧಾಲೋಚನೆಯಿಂದ ಆಯ್ಕೆ ಮಾಡಿದ ಶಾಲೆಗಳಲ್ಲಿ
ಪ್ರಥಮಾಧ್ಯತೆಯಿಂದ ಪ್ರಾರಂಭಿಸಿ ಶಿಫಾರಸ್ಸು ಮಾಡುವುದು. ಸ್ಪಷ್ಟ ಮತ್ತು ನಿಖರ
ಅಭಿಪ್ರಾಯದೊಂದಿಗೆ ಜಿಲ್ಲಾ ಹಂತಕ್ಕೆ ಪ್ರಸ್ತಾವನೆ ಸಲ್ಲಿಸುವುದು.

8.ಅಗತ್ಯವಿದ್ದಲ್ಲಿ ಇತರೆ ಪೂರಕ ವರದಿಯೊಂದಿಗೆ ಪ್ರಸ್ತಾವನೆಗಳನ್ನು ಅನುಬಂಧಗಳು, ಪೂರಕ
ದಾಖಲೆಗಳು, ಛಾಯಾ ಚಿತ್ರಗಳೊಂದಿಗೆ ಸಿದ್ಧಪಡಿಸಿ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.

## <u>2.ಜಿಲ್ಲಾ ಹಂತದ ಸಮಿತಿ ಮತ್ತು ಕರ್ತವ್ಯಗಳು</u>

ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರುಗಳು ಜಿಲ್ಲಾ
ಹಂತದ ಸಮಿತಿಯ ಸದಸ್ಯರಾಗಿರುತ್ತಾರೆ. ಸಲಹೆ/ಸಹಕಾರಕ್ಕಾಗಿ ಶಿಕ್ಷಣಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ,
ಡಿವೈ.ಪಿ.ಸಿ ,ಶಿಕ್ಷಣಾಧಿಕಾರಿಗಳು (mms) ಹಾಗೂ ಡಯಟ್ ಹಿರಿಯ ಉಪನ್ಯಾಸಕರುಗಳನ್ನು ಸಹ
ಸದಸ್ಯರುಗಳನ್ನಾಗಿ ನಿಯೋಜಿಸಿಕೊಳ್ಳುವುದು. ಪ್ರಸ್ತಾವನೆಗಳನ್ನು ಜಿಲ್ಲಾ ಡಯಟ್ ಗಳಲ್ಲಿ ಸ್ವೀಕರಿಸಿ
ಮತ್ತು ಕ್ರೂಢೀಕರಿಸಿ ಜಿಲ್ಲಾ ಸಮಿತಿಗೆ ಸಲ್ಲಿಸುವುದು.

### ಜಿಲ್ಲಾ ಕಛೇರಿ ಹಂತದಲ್ಲಿ ಮಾಹಿತಿ ಕ್ರೂಢೀಕರಣ ಮತ್ತು ಪ್ರಸ್ತಾವನೆ ಸಲ್ಲಿಕೆ

ತಾಲ್ಲೂಕು ಹಂತದ ಸಮಿತಿಯಲ್ಲಿ ನಿಗಧಿಪಡಿಸಿದಂತೆ ಪರಿಶೀಲನಾ ಕಾರ್ಯಗಳನ್ನು ಯಥಾವತ್ತಾಗಿ
ಮುಂದುವರೆಸುತ್ತಾ ಈ ಕೆಳಕಂಡಂತೆ ಮುಂದುವರೆದು ಕ್ರಮವಹಿಸುವುದು. ನಿರ್ವಹಣೆ / ಕ್ರಮ ಡಯಟ್
ಕಛೇರಿ.

1.ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಜಿಲ್ಲಾ ಸಮಿತಿಯು ಮೇಲ್ಕಂಡಂತೆ
ನೀಡಲಾದ ಮಾನದಂಡಗಳನ್ವಯ ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.
2.ಅನುಬಂಧಗಳಲ್ಲಿ ನೀಡಲಾದ ಎಲ್ಲಾ ಅಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸುವುದು.
3.ಅಗತ್ಯವಿದ್ದಲ್ಲಿ ಶಾಲೆಗಳ ಸ್ಥಳ ಪರಿಶೀಲನೆ ಮಾಡುವುದು.
4.ಸ್ವೀಕೃತವಾದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಮತ್ತು ಕ್ರೂಢೀಕರಿಸಿ ಆಧ್ಯತೆ ಮೇಲೆ
(ಕ್ರಮ ಸಂಖ್ಯೆ 1,2,3,4,5) ಎಂದು ಆಧ್ಯತೆ ನೀಡಿ ಸರ್ಕಾರಕ್ಕೆ ಆರ್ಥಿಕಹೊರೆಯಾಗದಂತೆ ಅಥವಾ
ಅನಾನುಕೂಲವಿದ್ದಲ್ಲಿ ಮಾತ್ರ ಮೂಲಭೂತ ಸೌಲಭ್ಯಗಳ ಬೇಡಿಕೆಯೊಂದಿಗೆ ಪ್ರಸ್ತಾವನೆ
ಪರಿಗಣಿಸುವುದು ಅನಿವಾರ್ಯ ಮತ್ತು ಆಧ್ಯತೆ ಬಂದಲ್ಲಿ ಸ್ಪಷ್ಟ ಅಭಿಪ್ರಾಯದೊಂದಿಗೆ ರಾಜ್ಯ ಹಂತಕ್ಕೆ
ಪ್ರಸ್ತಾವನೆಯನ್ನು ಸಲ್ಲಿಸುವುದು.

## <u>3.ರಾಜ್ಯ ಕಛೇರಿ ಹಂತದ ಸಮಿತಿ ಮತ್ತು ಕರ್ತವ್ಯಗಳು</u>

ಆಯುಕ್ತರು ಬೆಂಗಳೂರು ಮತ್ತು ಅಪರ ಆಯುಕ್ತರು ಧಾರವಾಡ/ಕಲಬುರ್ಗಿ, ರವರು ರಾಜ್ಯ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) , ನಿರ್ದೇಶಕರು (ಪ್ರೌಢ ಶಿಕ್ಷಣ), ನಿರ್ದೇಶಕರು (ಮೈನಾರಿಟಿ) ಹಾಗೂ ನಿರ್ದೇಶಕರು (ಕಾರ್ಯಕ್ರಮಗಳು) ಸಮಗ್ರ ಶಿಕ್ಷಣ ಕರ್ನಾಟಕ, ನಿರ್ದೇಶಕರು ಡಿ.ಎಸ್.ಇ.ಆರ್.ಟಿ, ನಿರ್ದೇಶಕರು ಕಲ್ಬುರ್ಗಿ/ಧಾರವಾಡ ರವರುಗಳು ರಾಜ್ಯ ಕಛೇರಿ ಹಂತದ ಸಮಿತಿಯ ಸದಸ್ಯರಾಗಿರುತ್ತಾರೆ. ಪ್ರಸ್ತಾವನೆಗಳು ಸಮಗ್ರ ಶಿಕ್ಷಣ ಕಛೇರಿಯಲ್ಲಿ ಸ್ವೀಕೃತಗೊಂಡು ಪರಿಶೀಲಿಸಿ ಕ್ರೂಢೀಕರಿಸಿ ರಾಜ್ಯ ಸಮಿತಿಗೆ ಸಲ್ಲಿಸುವುದು. ನಿರ್ವಹಣೆ / ಕ್ರಮ ಸಮಗ್ರ ಶಿಕ್ಷಣ ಕಛೇರಿ ಕಛೇರಿ.

1.ಉಪನಿರ್ದೇಶಕರು (ಆಡಳಿತ) ರವರಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ರಾಜ್ಯ ಸಮಿತಿಯು ಮೇಲ್ಕಂಡಂತೆ ಕ್ರಮ ಸಂಖ್ಯೆ 1 ರಿಂದ 6ರಲ್ಲಿ ನೀಡಲಾದ ಮಾನದಂಡಗಳನ್ವಯ ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

2.ಅನುಬಂಧಲ್ಲಿ ನಮೂದಿಸಿದ ರೀತ್ಯಾ ಪ್ರಸ್ತಾವನೆಯಲ್ಲಿ ದಾಖಲೆಗಳು ಲಭ್ಯವಿರುವ ಬಗ್ಗೆ ಪರಿಶೀಲಿಸಿ, ಆಧ್ಯತೆ ಮೇಲೆ ಶಾಲೆಗಳನ್ನು ಪರಿಗಣಿಸಿ, ಈ ಬಗ್ಗೆ ರಾಜ್ಯ ಸಮಿತಿಯಲ್ಲಿ ವಿಸ್ತೃತವಾಗಿ ಚರ್ಚೆ ಮಾಡಿ ರಾಜ್ಯ ಸರಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡತಕ್ಕದ್ದು.



Scanned with OKEN S...

**3.**ನಂತರ ರಾಜ್ಯ ಮಟ್ಟದಲ್ಲಿ ಸಮಿತಿ ಪರಿಶೀಲಿಸಿ ವಾಸ್ತವಾಂಶಗಳೊಂದಿಗೆ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಿ ಅನುಮೋದನ ಪಡೆದು ಅನುಷ್ಠಾನಕ್ಕೆ ಕ್ರಮವಹಿಸುವುದು.

**2024-25ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಶಾಲೆಗಳ ಪ್ರಸ್ತಾವನೆ ವೇಳಾಪಟ್ಟಿ.**

**(2024-25ನೇ ಸಾಲಿಗೆ ಸರ್ಕಾರಿ ಶಾಲೆಗಳ ಉನ್ನತೀಕರಣ/ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ/ ಶಾಲೆಗಳ ವಿಲೀನ ಇತರೆ ಕುರಿತಂತೆ ಪ್ರಸ್ತಾವನೆ ಸಲ್ಲಿಕೆ ಮತ್ತು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಗಧಿಪಡಿಸಿದ ವೇಳಾಪಟ್ಟಿ)**

| ಕ್ರ ಸ | ವಿವರ | ನಿಗಧಿಪಡಿಸಿದ ಕಾಲಮಿತಿ |
|---|---|---|
| 1 | ಶಾಲಾ ಹಂತದಲ್ಲಿ ಪ್ರಸ್ತಾವನೆ ಸಿದ್ಧಪಡಿಸಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ **(ಕ್ರಮ-ಸಿ.ಆರ್.ಸಿ)** | 28 ಫೆಬ್ರುವರಿ 2024 |
| 2 | ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆ ಕ್ರೂಢೀಕರಿಸಿ ತಾಲ್ಲೂಕು ಸಮಿತಿಯಲ್ಲಿ ಪರಿಶೀಲಿಸಿ/ಚರ್ಚಿಸಿ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ **(ಕ್ರಮ-ಬಿ.ಆರ್.ಸಿ/ಬಿ.ಇ.ಓ)** | 15 ಮಾರ್ಚ್ 2024 |
| 3 | ಉಪನಿರ್ದೇಶಕರು (ಅಭಿವೃದ್ಧಿ) ರವರು ಪ್ರಸ್ತಾವನೆಗಳನ್ನು ಕ್ರೂಢೀಕರಿಸಿ ಜಿಲ್ಲಾ ಸಮಿತಿಯಲ್ಲಿ ಮಂಡಿಸಿ ಪರಿಶೀಲಿಸಿ/ಚರ್ಚಿಸಿ (ಅಗತ್ಯವಿದ್ದಲ್ಲಿ ಸ್ಥಳ ಪರಿಶೀಲಿಸಿ) ರಾಜ್ಯ ಕಛೇರಿಗೆ (ಸಮಗ್ರ ಶಿಕ್ಷಣ ಕರ್ನಾಟಕ) ಪ್ರಸ್ತಾವನ ಸಲ್ಲಿಸುವುದು. **(ಕ್ರಮ-ಜಿಲ್ಲಾ ಡಯಟ್)** | 30 ಮಾರ್ಚ್ 2024 |
| 4 | ರಾಜ್ಯ ಹಂತದಲ್ಲಿ (ಸಮಗ್ರ ಶಿಕ್ಷಣ ಕರ್ನಾಟಕ) ವಿಭಾಗದಲ್ಲಿ ಪ್ರಸ್ತಾವನೆಗಳನ್ನು ಕ್ರೂಢೀಕರಿಸಿ ರಾಜ್ಯ ಮಟ್ಟದ ಸಮಿತಿಗೆ ಮಂಡಿಸಿ ಪರಿಶೀಲಿಸಿ ಚರ್ಚಿಸಿ ಸರ್ಕಾರಕ್ಕೆ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ **(ಕ್ರಮ-ಸಮಗ್ರ ಶಿಕ್ಷಣ ಕರ್ನಾಟಕ )** | 15 ಏಪ್ರಿಲ್ 2024 |
| 5 | ರಾಜ್ಯ ಕಛೇರಿ ಸಮಿತಿಯಿಂದ ಶಿಫಾರಸ್ಸಿನೊಂದಿಗೆ ಬಂದ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಅನುಮೋದನೆ ನೀಡಲು ನಿಗಧಿಪಡಿಸಿದ ಅಂತಿಮ ದಿನಾಂಕ **(ಕ್ರಮ-ಸರ್ಕಾರದ ಹಂತದಲ್ಲಿ)** | 30 ಏಪ್ರಿಲ್ 2024 |
| 6 | ಸಂಬಂಧಿಸಿ ಶಾಲೆ/ಗ್ರಾಮ/ತಾಲ್ಲೂಕು/ಜಿಲ್ಲೆಗಳಲ್ಲಿ ಅಗತ್ಯ ಪೂರ್ವ ಸಿದ್ಧತೆಗಳೊಂದಿಗೆ ವ್ಯಾಪಕ ಪ್ರಚಾರದೊಂದಿಗೆ ಅನುಷ್ಠಾನಕ್ಕೆ ನಿಗಧಿಪಡಿಸಿದ ದಿನಾಂಕ **(ಕ್ರಮ ಸಂಬಂಧಿಸಿದ ಶಾಲಾ ಮುಖ್ಯಸ್ಥರು)** | 15 ಮೇ 2024 |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ. ರವರಿಗೆ ಕಳುಹಿಸುತ್ತಾ ಅಗತ್ಯಾನುಸಾರ ಕ್ರಮಕ್ಕೆ ಅಧೀನ ಅಧಿಕಾರಿ/ಸಿಬ್ಬಂದಿಗಳಾದ ಶಾಲಾ ಮುಖ್ಯಸ್ಥರು, ಬಿ.ಆರ್.ಸಿ /ಬಿ.ಇ.ಓ ರವರಿಗೆ ಅಗತ್ಯ ಕ್ರಮಕ್ಕಾಗಿ



Scanned with OKEN Scanner

ಪ್ರತಿಯನ್ನು (ಗೌರವಪೂರ್ವಕವಾಗಿ ಮತ್ತು ಮಾಹಿತಿಗಾಗಿ ಅಗತ್ಯಕ್ರಮಕ್ಕಾಗಿ ಸಲ್ಲಿಸಿದೆ)

1. ಮಾನ್ಯ ಸರ್ಕಾರದ ಪ್ರದಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು-1
2. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಅಧ್ಯಗಮನಕ್ಕೆ ತರವಂತೆ ಈ ಮೂಲಕ ಕೋರಿದೆ.
3. ಅಪರ ಆಯುಕ್ತರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಧಾರವಾಡ ಮತ್ತು ಕಲಬುರ್ಗಿ
4. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು
5. ನಿರ್ದೇಶಕರು (ಪ್ರೌಢಶಿಕ್ಷಣ) (ಪ್ರಾಥಮಿಕ ಶಿಕ್ಷಣ) (ಮೈನಾರಿಟಿ) ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು
6. ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು-85
7. ನಿರ್ದೇಶಕರು ಗುಣಮಟ್ಟ ಮತ್ತು ಕಾರ್ಯಕ್ರಮಗಳು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು
8. ಜಂಟಿ ನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಆಯುಕ್ತರ ಕಛೇರಿ ಬೆಂಗಳೂರು
9. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ
10. ರಾಜ್ಯದ ಜಿಲ್ಲಾ ಪಂಚಾಯತ್‌ಗಳ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾಹಿತಿಗಾಗಿ

20.10.2018

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ



Scanned with OKEN Scanner

ಅನುಬಂಧ-01

**ಕಿರಿಯ ಪ್ರಾಥಮಿಕ ಶಾಲೆಯಿಂದ ಹಿರಿಯ ಪ್ರಾಥಮಿಕಶಾಲೆಗೆ/ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ ಪ್ರಾರಂಭ/ 9-10ನೇ ತರಗತಿ ಉನ್ನತೀಕರಣ ನಮೂನೆ ( 6-7/8 ಮತ್ತು 9-10 ನೇ ತರಗತಿ)**

| | ವಿವರ | ಮಾಹಿತಿ |
|---|---|---|
| | ಜಿಲ್ಲೆಯ ಹೆಸರು | |
| 2 | ತಾಲ್ಲೂಕಿನ ಹೆಸರು | |
| 3 | ಶಾಲೆ ಹೆಸರು ಸ್ಥಳ ಮತ್ತು ವಿಳಾಸ | |
| 4 | ಶಾಲೆಯ ಡೈಸ್ ಕೋಡ್ | |
| 5 | ಶಾಲ ನಡೆಯುತ್ತಿರುವ ಮಾಧ್ಯಮ | |
| 6 | ಶಾಲ ಉನ್ನತೀಕರಿಸಲು ಕೋರಿದ ಮಾಧ್ಯಮ | |
| 7 | ಮಂಜೂರಾದ ಹುದ್ದೆಗಳ ಸಂಖ್ಯೆ | HM / PST / AGT+GPT+TGT / PE / OTH / TOTAL |
| | ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | |
| 8 | ಶಾಲೆ ಉನ್ನತೀಕರಿಸಿದಲ್ಲಿ ತರಗತಿ ಬೋಧನೆಗೆ ಶಿಕ್ಷಕರ ಲಭ್ಯತೆ ವಿವರ | |
| 9 | ಯಾವ ತರಗತಿಗೆ ಶಾಲೆಯನ್ನು ಉನ್ನತೀಕರಿಸಲಾಗುತ್ತಿದೆ. | |
| 10 | ತರಗತಿವಾರು ಮಕ್ಕಳ ದಾಖಲಾತಿ ಮತ್ತು ಒಟ್ಟು ವಿಭಾಗಗಳು | 1ನೇ / 2ನೇ / 3ನೇ / 4ನೇ / 5ನೇ / 6ನೇ / 7ನೇ / 8ನೇ / 9ನೇ / 10ನೇ / ಒಟ್ಟು |
| 11 | ಶಾಲೆ ಉನ್ನತೀಕರಿಸಿದಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ | |
| 12 | ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ( 6 ರಿಂದ 7ನೇ ತರಗತಿಗೆ) ಉನ್ನತೀಕರಿಸಲು ಉದ್ದೇಶಿಸಿರುವ ಸ್ಥಳದಿಂದ 3 ಕಿ.ಮೀ ವ್ಯಾಪ್ತಿಯೊಳಗೆ ಯಾವುದೇ ಸರ್ಕಾರಿ.ಅನುದಾನಿತ. ಅನುದಾನ ರಹಿತ ಶಾಲೆಗಳು ನಡೆಯುತ್ತಿಲ್ಲದ ಬಗ್ಗೆ ಖಚಿತ ಪಡಿಸಿಕೊಳ್ಳುವುದು.ಹೀಗೆಯೇ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿಗೆ ಉನ್ನತೀಕರಿಸಲು ಹಾಗೂ 9-10ನೇ ತರಗತಿಗೆಉನ್ನತೀಕರಿಸಲು 5 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳು ನಡೆಯುತ್ತಿಲ್ಲದಿರುವ ಬಗ್ಗೆ, School Acces ಶಾಲಾ ಲಭ್ಯತೆ ಪರಿಶೀಲಿಸಿಕೊಂಡು ಪ್ರಸ್ತಾವನೆ ಸಲ್ಲಿಸುವುದು. (1 ರಿಂದ 5 ಕಿ.ಮೀ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಶಾಲೆಗಳ ವಿವರ) | 1<br>2<br>3<br>4<br>5 |
| 13 | ಉನ್ನತೀಕರಣಕ್ಕಿಂತ ಮುಂಚೆ ಈ ವಿದ್ಯಾರ್ಥಿಗಳು ಯಾವ ಶಾಲೆಗೆ ದಾಖಲಾಗಿ ವ್ಯಾಸಂಗ ಮಾಡುತ್ತಿರುತ್ತಾರೆ ಶಾಲೆಯ ವಿವರ ( ಡೈಸ್ ಕೋಡ್ ನೊಂದಿಗೆ) | 1<br>2<br>3 |
| 14 | ಶಾಲೆ ಉನ್ನತೀಕರಿಸಲು ಪ್ರಸ್ತಾಪಿಸಿರುವ ಸ್ಥಳದಲ್ಲಿ ಮೂಲ ಭೂತ ಸೌಕರ್ಯಗಳ ವಿವರ (ಕೊಠಡಿಗಳ ಲಭ್ಯತೆ. ಶೌಚಾಲಯ. ಕುಡಿಯುವ ನೀರು. ಅಕ್ಷರ ದಾಸೋಹ ಕೊಠಡಿ ವ್ಯವಸ್ಥೆ ಪೀಠೋಪಕರಣ. ಆಟೋಪಕರಣದ ಲಭ್ಯತೆ ಬಗ್ಗೆ ವಿವರ) | |
| 15 | ಶಾಲೆಯನ್ನು ಉನ್ನತೀಕರಿಸಿದಲ್ಲಿ ಅಕ್ಕ ಪಕ್ಕದ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲಿದೆಯೇ ಕಡಿಮೆಯಾದಲ್ಲಿ ಈ ಬಗ್ಗೆ ತೆಗೆದುಕೊಳ್ಳಲಾಗುವ ಕ್ರಮದ ಬಗ್ಗೆ ವಿವರ | |
| 16 | ಉನ್ನತೀಕರಿಸುತ್ತಿರುವ ಶಾಲೆಯಲ್ಲಿನ ಬೋಧನಾ ಕೊಠಡಿಗಳ ಸಂಖ್ಯೆ (ಕೊಠಡಿಗಳು ಸುರಕ್ಷತೆಯಿಂದ ಕೂಡಿದೆಯೇ) | |
| 17 | ಉದ್ದೇಶಿತ ಸ್ಥಳದಲ್ಲಿನ ಜನಸಂಖ್ಯೆ | |
| 18 | ಗ್ರಾಮ ಸಭೆಯ/ಸ್ಥಳೀಯರ ನಿರ್ಣಯ | |
| 19 | ಬಿ.ಇ.ಓ ರವರ ಸ್ಥಳ ಪರಿಶೀಲನಾ ವರದಿ ಸ್ಪಷ್ಟ ಶಿಫಾರಸ್ಸಿನೊಂದಿಗೆ | |
| 20 | ಉಪನಿರ್ದೇಶಕರ ಶಿಫಾರಸ್ಸು ಮತ್ತು ಅಭಿಪ್ರಾಯ | |
| 21 | ಜನಪ್ರತಿನಿಧಿಗಳು/ಗಣ್ಯರ/ಸಾರ್ವಜನಿಕರ ಅಭಿಪ್ರಾಯ ಇದ್ದಲ್ಲಿ ಲಗತಿಸುವುದು | |
| 22 | ಷರಾ/ ಇತರ ಅಗತ್ಯ ಮಾಹಿತಿ | |

ಸಹಿ/-
ಮು.ಶಿ/ತಾಲ್ಲೂಕು ಸಮಿತಿ/ಜಿಲ್ಲಾ ಸಮಿತಿಗಳು
(ಪ್ರತಿ ಸಮಿತಿಯು ಪ್ರತ್ಯೇಕವಾಗಿ ಸಹಿ ಮಾಡುವುದು)

Scanned with OKEN Scanner